C-AVZ-O-LOLA

KANNADA

Paper I

(LITERATURE)

Time allowed : Three Hours | *Maximum Marks : 250*

Question Paper Specific Instructions

Please read each of the following instructions carefully before attempting questions :

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to b attempted choosing at least **ONE** from each section.*

The number of marks carried by a question / part is indicated against it.

*Answers must be written in **KANNADA**.*

Word limit in questions, wherever specified, should be adhered to.

Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.

Optional Province · optionalprovince.com

SECTION A

Q1. ಕೆಳಗೆ ಕೋಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣ ಬರೆಯಿರಿ.
(ಪ್ರತಿಯೊಂದು ಟಿಪ್ಪಣ 150 ಪದಗಳಿಗೆ ಮೀರದಂತೆ ಇರಬೇಕು)

(a) ಕನ್ನಡ ಭಾಷೆಯ ಪ್ರಭೇದಗಳು : ಪ್ರಾದೇಶಿಕ ಮತ್ತು ಸಾಮಾಜಿಕ. *10*

(b) 'ಆದಿಪುರಾಣ' ಕಾವ್ಯದ ಧಾರ್ಮಿಕ ಮೌಲ್ಯ : ಭರತ ಮತ್ತು ಬಾಹುಬಲಿ ಮುಖಾಮುಖಿಯ ಪ್ರಸಂಗ. *10*

(c) ಅಕ್ಕನ ವಚನಗಳಲ್ಲಿ ದೇಹದ ಪ್ರತಿಮೆಗಳ ವಿಶಿಷ್ಟತೆ. *10*

(d) ನವೋದಯ ಸಾಹಿತ್ಯ ಮತ್ತು ರಾಷ್ಟ್ರೀಯತೆಯ ಪರಿಕಲ್ಪನೆ. *10*

(e) ಹೊಸಗನ್ನಡ ನಾಟಕ ಹಾಗೂ ದುರಂತ ನಾಟಕ. *10*

Q2. (a) ಕನ್ನಡ ಭಾಷೆಯ ಪ್ರಾಚೀನತೆಯನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡಿ. ಪೂರ್ವದ ಹಳಗನ್ನಡದ ಶಾಸನಗಳ ಭಾಷೆ, ಛಂದಸ್ಸು ಮತ್ತು ಶೈಲಿ ಹೇಗೆ ಹಳಗನ್ನಡ ಸಾಹಿತ್ಯದ ಮುಂಜಾವನ್ನು ಸೂಚಿಸುತ್ತದೆ ಎಂಬುದನ್ನು ಚರ್ಚಿಸಿ. *15*

(b) ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ವ್ಯಕ್ತಗೊಂಡ ಜನಸಮ್ಮುಖ ಧೋರಣೆಗಳನ್ನು ರಾಘವಾಂಕನ ಹರಿಶ್ಚಂದ್ರ ಕಾವ್ಯ ಮತ್ತು ಕುಮಾರ ವ್ಯಾಸನ ಭಾರತ ಕಾವ್ಯಗಳನ್ನು ಆಧರಿಸಿ ಪರಿಚಯ ಮಾಡಿಕೊಡಿ. *15*

(c) ಪ್ರಗತಿಶೀಲ ಚಳುವಳಿಯ ಸಾಧನೆ ಮತ್ತು ಮಿತಿಗಳನ್ನು ಕುರಿತು ವಿಶ್ಲೇಷಿಸಿ. *10*

(d) ದಲಿತ ಮತ್ತು ಬಂಡಾಯ ಸಾಹಿತ್ಯಗಳ ಪರಸ್ಪರ ಸಂಬಂಧ ಮತ್ತು ಸ್ವರೂಪಗಳನ್ನು ಕುರಿತು ಚರ್ಚಿಸಿ. *10*

Optional Province · optionalprovince.com

Q3. (a) ದ್ರಾವಿಡ ಭಾಷಾ ಪರಿವಾರವನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿ ಅದರ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ ವೈಶಿಷ್ಟ್ಯಗಳನ್ನು ಗುರುತಿಸಿ. *15*

(b) 'ಹರಿಶ್ಚಂದ್ರ ಕಾವ್ಯವು ರಾಘವಾಂಕನ ಅಲೌಕಿಕವಾದ ಲೌಕಿಕಕಾವ್ಯವಾಗಿದೆ' – ಪರಿಶೀಲಿಸಿ. *15*

(c) ಪುರಂದರ ದಾಸರು ಹಾಗೂ ಕನಕದಾಸರ ಕೀರ್ತನೆಗಳಲ್ಲಿ ಸ್ತ್ರೀ ಅಭಿವ್ಯಕ್ತಿಗೊಂಡಿರುವ ರೀತಿಯನ್ನು ಕುರಿತು ಚರ್ಚಿಸಿ. *10*

(d) ಬಸವಣ್ಣನವರ ಜೀವನ ಆಧುನಿಕ ಕನ್ನಡ ನಾಟಕಗಳಲ್ಲಿ ಎಬ್ಬಿಸಿರುವ ವಿವಾದವನ್ನು ಸಂಕ್ರಾಂತಿ, ಮಹಾಚೈತ್ರ ಹಾಗೂ ತಲೆದಂಡ ನಾಟಕಗಳಲ್ಲಿ ಪರಿಶೀಲಿಸಿ. *10*

Q4. (a) ಕನ್ನಡದ ನವೋದಯ ಮತ್ತು ದಲಿತ ಕಥೆಗಳ ಪ್ರೇರಣೆ ಮತ್ತು ಧೋರಣೆಗಳನ್ನು ತೌಲನಿಕವಾಗಿ ವಿವೇಚಿಸಿ. *15*

(b) ಹೊಸಗನ್ನಡ ಸಾಹಿತ್ಯದ ಉಗಮದಲ್ಲಿ ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆ ಮತ್ತು ಪ್ರಭಾವಗಳನ್ನು ಸಾಹಿತ್ಯ ರೂಪಗಳಿಗೆ ಸಂಬಂಧಿಸಿದಂತೆ ಚರ್ಚಿಸಿ. *15*

(c) ಕನ್ನಡ ಭಾಷೆಯಲ್ಲಿ ಭಾಷಾಸ್ವೀಕರಣೆಯ ಪ್ರಕ್ರಿಯೆಗಳನ್ನು ಗುರುತಿಸಿ, ಆಗಿರುವ ಅರ್ಥವ್ಯತ್ಯಾಸದ ಪ್ರಕ್ರಿಯೆಯನ್ನು ಉದಾಹರಣೆಗಳೊಂದಿಗೆ ಚರ್ಚಿಸಿ. *10*

(d) ಕನ್ನಡ ವಚನಕಾರ್ತಿಯರ ವಚನಗಳಲ್ಲಿ, ವಿಶೇಷವಾಗಿ ಅಕ್ಕಮಹಾದೇವಿಗೆ ಸಂಬಂಧಿಸಿದಂತೆ, ಕಂಡುಬರುವ ಸ್ತ್ರೀ–ಪುರುಷ ವಿವಕ್ಷೆಯನ್ನು ಗುರುತಿಸಿ. *10*

Optional Province · optionalprovince.com

SECTION B

Q5. ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ.
(ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು)

(a) ಕಾವ್ಯಮೀಮಾಂಸೆ ಹಾಗೂ ಸಾಹಿತ್ಯ ವಿಮರ್ಶೆ *10*

(b) ಆನ್ವಯಿಕ ವಿಮರ್ಶೆ *10*

(c) ಕರ್ನಾಟಕದ ಶಿಲ್ಪಕಲೆಯ ವೈವಿಧ್ಯತೆ ಮತ್ತು ರಾಜ್ಯಾಶ್ರಯ *10*

(d) ವಿಜಯನಗರ ಅರಸರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕೊಡುಗೆಗಳು. *10*

(e) ಕರ್ನಾಟಕ ಸಂಗೀತ ಪರಂಪರೆ, ದಾಸರ ಪದಗಳು ಮತ್ತು ಗಮಕ ವಾಚನ ಪರಂಪರೆಗಳು. *10*

Q6. (a) ಭರತನ ರಸಸೂತ್ರದ ಹಿನ್ನಲೆಯಲ್ಲಿ ನಿರೂಪಿತವಾಗಿರುವ ಪ್ರಾಚೀನ ಲಾಕ್ಷಣಿಕರ ವಿಚಾರಗಳನ್ನು ಪರಾಮರ್ಶಿಸಿ. *15*

(b) ಹೊಯ್ಸಳರ ಕಾಲದ ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಗಳ ವೈಶಿಷ್ಟ್ಯಗಳನ್ನು ಬಾದಾಮಿ ಚಾಲುಕ್ಯರ ಕಾಲದ ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಗಳಿಗೆ ಹೋಲಿಸಿ ಬರೆಯಿರಿ. *15*

(c) ಜೈನ ಧರ್ಮವು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ನೀಡಿರುವ ಮುಖ್ಯಕೊಡುಗೆಗಳನ್ನು ಗುರುತಿಸಿ. *10*

(d) ರೀತಿ ಪ್ರಸ್ಥಾನ ಹಾಗೂ ಶೈಲಿ (style) ಸಿದ್ಧಾಂತಗಳ ಸಾಮ್ಯ, ಹಾಗೂ ವೈದೃಷ್ಯಗಳನ್ನು ಕುರಿತು ಚರ್ಚಿಸಿ. *10*

Optional Province · optionalprovince.com

Q7. (a) ಕರ್ನಾಟಕವು ವಸಾಹತೋತ್ತರ ಕಾಲದಲ್ಲಿ ಕಂಡ ಸಾಹಿತ್ಯಿಕ ಚಳುವಳಿಗಳ ಬಗೆಗೆ ಸಾಮಾಜಿಕ ನ್ಯಾಯ ಮತ್ತು ಅಂಗಬೇಧಗಳನ್ನು ಕುರಿತಂತೆ ಚರ್ಚಿಸಿ. *15*

(b) ಧ್ವನಿ ಸಿಧ್ಧಾಂತದ ಪರಿಕಲ್ಪನೆ ಹಾಗೂ ಅದು ಬೆಳೆದು ಬಂದ ಬಗೆಯನ್ನು ವಿವರಿಸಿ. *15*

(c) ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ರೀತಿ ಮತ್ತು ಔಚಿತ್ಯಗಳಿಗೆ ಸಂಬಂಧಿಸಿದಂತೆ ನಡೆದಿರುವ ಚಿಂತನೆಗಳನ್ನು ತೌಲನಿಕವಾಗಿ ಪಂಚಯ ಮಾಡಿಕೊಡಿ. *10*

(d) ಕನ್ನಡ ಸಾಹಿತ್ಯದ ಮೇಲೆ ಕರ್ನಾಟಕ ಏಕೀಕರಣ ಚಳುವಳಿ ಹಾಗೂ ಭಾರತೀಯ ಸ್ವಾತಂತ್ರ ಚಳುವಳಿಗಳ ಪ್ರಭಾವವನ್ನು ತೌಲನಿಕನಾಗಿ ಸಮಾಲೋಚಿಸಿ. *10*

Q8. (a) ಮಧ್ಯಕಾಲೀನ ದೇವಾಲಯಗಳು ಕನ್ನಡ ಸಾಹಿತ್ಯ, ಸಂಗೀತ ಹಾಗೂ ನೃತ್ಯಗಳಿಗೆ ಸಂಗೋಪನಾ ಕೇಂದ್ರಗಳು. ಚರ್ಚಿಸಿ. *15*

(b) ಭಾರತೀಯ ಕಾವ್ಯಮೀಮಾಂಸೆ ಹಾಗೂ ಆಧುನಿಕ ಸಾಹಿತ್ಯ ವಿಮರ್ಶೆಯ ಸಿದ್ಧಾಂತಗಳನ್ನು ನೃತ್ಯಕಲೆ ಮತ್ತು ರಂಗಭೂಮಿಗಳಿಗೆ ಅನ್ವಯಿಸಲು ಸಾಧ್ಯವೇ – ಪರಿಶೀಲಿಸಿ. *15*

(c) ಕನ್ನಡದ ದಲಿತ-ಬಂಡಾಯ ಚಳುವಳಿಯ ತಾತ್ವಿಕತೆ ಸಾಹಿತ್ಯಿಕ ಮತ್ತು ವಿಮರ್ಶಾತ್ಮಕ ನೆಲೆಗಳಲ್ಲಿ ಹೇಗೆ ಅಭಿವ್ಯಕ್ತಿ ಗೊಂಡಿದೆ ಎಂಬುದನ್ನು ವಿವರಿಸಿ. *10*

(d) ಅಸ್ತಿತ್ವವಾದ ಎಂದರೇನು ? ಹೊಸಗನ್ನಡ ಸಾಹಿತ್ಯದ ಮೇಲೆ ಅದು ಬೀರಿದ ಪ್ರಭಾವ – ಪರಿಣಾಮಗಳನ್ನು ಪರಿಶೀಲಿಸಿ. *10*

Optional Province · optionalprovince.com